ಏನಾಗುತ್ತದೆಂದು ಅಂದುಕೊಂಡು ತಾವು ಸುಮ್ಮನೆ ಕೂತುಕೊಳ್ಳುವವರು ಎಂದು ನಾನು ತಿಳಿದು ಕೊಂಡಿಲ್ಲ. ತಾವು ಮನಸ್ಸು ಮಾಡಿ. ಅವರು ಉಪವಾಸ ಸತ್ಯಾಗ್ರಹವನ್ನು ಆದಷ್ಟು ಬೇಗ ನಿಲ್ಲಿಸಿ ಇಲ್ಲಿಗೆ ಬರುವ ವ್ಯವಸ್ಥೆ ಮಾಡಬೇಕು. ಅವರು ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸ ಬೇಕಾದರೆ. ಸರ್ಕಾರದವರು ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಂಡರೆ ಮಾತ್ರ ಸಾಧ್ಯ. ಇಲ್ಲದೇ ಹೋದರೆ ಇದು ಸುಲಭವಾಗಿ ಬಗೆಹರಿಯುವುದಿಲ್ಲ. ತಾವು ಅಪೀಲು ಮಾಡಿಕೊಂಡರೆ, ಉಪವಾಸ ಸತ್ಯಾಗ್ರಹ ನಿಲ್ಲಿಸಿಬಿಡುತ್ತಾರೆಂದು ನನಗೆ ನಂಬಿಕೆ ಇಲ್ಲ. ಕೈಗಾರಿಕೆಗಳನ್ನು ನಡೆಸಬೇಕು, ಕಾರ್ಮಿಕರಿಗೆ ಅನುಕೂಲವಾಗಬೇಕು. ನಾನು ರಾಜ್ಯದ ಎಲ್ಲಾ ಕೈಗಾರಿಕೆಗಳನ್ನು ದೃಷ್ಟಿಯಿಟ್ಟುಕೊಂಡು ಈ ಮಾತು ಹೇಳುತ್ತಿದ್ದೇನೆ, ಇವತ್ತು ನಮ್ಮ ರಾಜ್ಯದಲ್ಲಿರುವಂಥ ಕೈಗಾರಿಕೆಗಳಲ್ಲಿ ಮುಕ್ಕಾಲು ಭಾಗದ ಕೈಗಾರಿಕೆ ಗಳು ಮುಗ್ಗಟ್ಟಿನಿಂದ ಕೂಡಿವೆ. ಚೆನ್ನಾಗಿ ನಡೆಯುತಕ್ಕ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಕಡಿಮೆ ಇವೆ. ಎಲ್ಲಾ ಕೈಗಾರಿಕೆಗಳ ಬಗ್ಗೆ ಬ್ಯಾಲೆನ್ಸ್ ಷೀಟು ನೋಡಿ, ರಿಟರ್ನ್ಸ್ ತೆಗೆದು ಹೇಳುವುದಕ್ಕೆ ಹೋಗುವುದಿಲ್ಲ. ಇಂದಿನ ಚರ್ಚೆ ಕೂಡ ಆದಾಗಿಲ್ಲ. ಮೂಲಭೂತವಾಗಿ ಸಾರ್ವಜನಿಕ ಕ್ಷೇತ್ರದ ಹಾಗೂ ಖಾಸಗಿ ಕ್ಷೇತ್ರದ ದೊಡ್ಡ ಕೈಗಾರಿಕೆಗಳು ಇರಲಿ, ಮಧ್ಯಮ ಶ್ರೇಣಿಯ ಕೈಗಾರಿಕೆಗಳು ಇರಲಿ ಸಣ್ಣ ಕೈಗಾರಿಕೆಗಳು ಇರಲಿ, ಒಂದಲ್ಲ ಒಂದು ರೀತಿಯಲ್ಲಿ ತೊಂದರೆಗೆ ಒಳಗಾಗಿವೆ. ಈ ತೊಂದರೆಯನ್ನು ನಿವಾರಿಸುವ ಕಡೆಗೆ ಸರ್ಕಾರದವರು ಗಮನಹರಿಸಬೇಕಾಗಿದೆ. ಇದು ಅದರ ಜವಾಬ್ದಾರಿ ಕೂಡ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೬,೦೦೦ ಕೈಗಾರಿಕೆಗಳು ಸಣ್ಣ ಮತ್ತು ಮಧ್ಯಮ ಪ್ರಮಾಣದವು ಸೇರಿ, ಮುಚ್ಚಿವೆ. ಇನ್ನೂ ಸಹಸ್ರಾರು ಕೈಗಾರಿಕೆಗಳು ಮುಚ್ಚುವಂಥ ಪರಿಸ್ಥಿತಿಯಲ್ಲಿ, ಮುಚ್ಚುವಂಥ ಹಾದಿಯಲ್ಲಿವೆ ಎಂದು ಸರ್ಕಾರದ ವಕ್ತಾರರೇ ಹೇಳಿದ್ದಾರೆ. ಇನ್ನು ದೊಡ್ಡ ದೊಡ್ಡ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ. ಇವತ್ತು ಟಿಕ್ಸ್ ಟೈಲ್ಸ್ ಕೈಗಾರಿಕೆ ಏನಾಗಿದೆ ಅಂದರೆ, ರಾಜ್ಯದಲ್ಲಿರುವಂಥ ೬ ಮಿಲ್‌ಗಳು ಸಂಪೂರ್ಣವಾಗಿ ಮುಚ್ಚಿವೆ. ಸಹಕಾರಿ ಕ್ಷೇತ್ರದಲ್ಲಿ ನಡೆಯುವಂಥ ಮಿಲ್‌ಗಳು ಇಲ್ಲದೇ ಇರಬಹುದು. ಆದರೂ ಬಟ್ಟೆ ಮಿಲ್‌ಗಳು ಇವತ್ತು ತೊಂದರೆಗೆ ಒಳಗಾಗಿವೆ. ಇವುಗಳನ್ನು ನಡೆಸುವುದಕ್ಕೆ ತೊಂದರೆ ಇರಬಹುದು. ಮತ್ತೊಂದು ಇರಬಹುದು. ಆದರ ಭಾರ ಮಾತ್ರ ಕಾರ್ಮಿಕರ ಮೇಲೆ ಬರುತ್ತದೆ. ಇವತ್ತು ದಾವಣಗೆರೆಯನ್ನು ಕರ್ನಾಟಕ ''ಮ್ಯಾಂಚೆಸ್ಟರ್'' ಎಂದು ಕರೆಯುತ್ತೇವೆ. ಅಲ್ಲಿ ಗಣೇಶ ಟೆಕ್ಸ್‌ಟೈಲ್, ಸಿದ್ದೇಶ್ವರ ಟೈಕ್‌ಟೈಸ್ ಚಿಟಗೇರಿ ಟೆಕ್‌ಟೈಲ್ ಮಿಲ್‌ಗಳು ಮುಚ್ಚಿವೆ. ಶಂಕರ್ ಟೆಕ್ಸ್‌ಟೈಲ್ ಮಿಲ್ ಮುಚ್ಚಿ ಮೂರು ವರ್ಷಗಳಾದವು. ಮೈಸೂರಿನಲ್ಲಿ ಕೆ. ಆರ್. ಮಿಲ್ ಮುಚ್ಚಿದೆ. ಬಳ್ಳಾರಿಯಲ್ಲಿ ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ ಮುಚ್ಚಿದೆ. ನರಗಂದ ಮಿಲ್ ತೊಂದರೆಯಲ್ಲಿದ್ದು, ಲೇ-ಆಫ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಲ್ಲಿ ಕಾರ್ಮಿಕರಿಗೆ ತೊಂದರೆಯಾಗಿದೆ. ನಂಜನಗೂಡಿನ ಟೆಕ್ಸ್‌ಟೈಲ್ ಮಿಲ್ ಇದೇ ಪರಿಸ್ಥಿತಿಯಲ್ಲಿದೆ. ಹೀಗೆ

ಸಜಾತಾ ಟೆಕ್ಸ್‌ಟೈಲ್ಸ್ ನಂಜನಗೂಡಿನದ್ದು. ಅಲ್ಲೂ ಕೂಡ ತೊಂದರೆ ಇದೆ. ಮೇಲಿಂದ ಮೇಲೆ ಒತ್ತಾಯ ತರುತ್ತಿದ್ದಾರೆ. ಏನುಆಗುತ್ತದೋ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಶ್ರೀ ಕೃಷ್ಣನ್ ಅವರೇ ನೀವು ನಾಳೆ ಮುಂದುವರೆಸಿ. ಈಗ ಬಿಲ್‌ಗಳನ್ನು ತೆಗೆದುಕೊಳ್ಳೋಣ.

ಶಾಸನ ರಚನಾ ಕಲಾಪಗಳು

ಕರ್ನಾಟಕ ಮನೋರಂಜನಾ ತೆರಿಗೆಗಳ (ನಾಲ್ಕನೇ ತಿದ್ದುಪಡಿ) ವಿಧೇಯಕ, ೧೯೮೭

ಪರ್ಯಾಲೋಚನಾ ಪ್ರಸ್ತಾವ

ಪ್ರೊ।। ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಕರ್ನಾಟಕ ಮನೋರಂಜನಾ ತೆರಿಗೆಗಳ (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಪ್ರೊ।।ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದು ಅತ್ಯಂತ ಸುಲಭವಾದ ತಿದ್ದುಪಡಿ. ಇದರಲ್ಲಿ ಏನಾಗಿದೆ ಎಂದರೆ ಈಗ ಇರತಕ್ಕಂಥ ಕಾನೂನಿನಲ್ಲಿ ಲೋಕಲ್ ಅಥಾರಿಟೀಸ್ ವಿಲೇಜ್

ಪಂಚಾಯತ್ ಎಂದು ಇದೆ. ಅದಕ್ಕೆ ಬದಲಾಗಿ ಮಂಡಲ್ ಪಂಚಾಯತ್ ಎಂದು ಬದಲಾವಣೆ ಮಾಡಬೇಕಾಗಿದೆ ಅಷ್ಟೆ. ಇದರಲ್ಲಿ ಬಹಳ ವಿಶೇಷವೇನೂ ಇಲ್ಲ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ '' ಕರ್ನಾಟಕ ಮನೋರಂಜನಾ ತೆರಿಗೆಗಳ (ನಾಲ್ಕನೇ ತಿದ್ದುಪಡಿ) ವಿಧೇಯಕ ೧೯೮೭ ಇದನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ–೨

ಅಧ್ಯಕ್ಷರು.—ಖಂಡ–೨ ವಿಧೇಯಕದ ಅಂಗವಾಗಿರುತ್ತದೆ.

(ಖಂಡ–೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ ;

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್.—೧೯೮೭ರ ಕರ್ನಾಟಕ ಮನೋರಂಜನಾ ತೆರಿಗೆಗಳ (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ '' ೧೯೮೭ರ ಕರ್ನಾಟಕ ಮನೋರಂಜನಾ ತೆರಿಗೆಗಳ (ಏನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೭

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ' ೧೯೮೭ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ತಿದ್ದುಪಡಿಯನ್ನು ಮುಖ್ಯವಾಗಿ ತಂದಿರತಕ್ಕ ಉದ್ದೇಶ ಏನೆಂದರೆ ಅನೇಕ ಜನ ಟ್ಯಾಕ್ಸ್ ಕೊಡದೆ ಕೆಲವು ವಾಹನಗಳನ್ನು ಅನೇಕ ದಿವಸ, ತಿಂಗಳುಕಾಲ ಇಟ್ಟು ಕೊಳ್ಳುತ್ತಾರೆ. ಅದನ್ನು ನಮ್ಮ ಆರ್. ಟಿ. ಓ. ದವರು ಸೀಜ್ ಮಾಡುತ್ತಾರೆ. ಹೀಗೆ ಸೀಜ್ ಮಾಡಿದ ಮೇಲೆ ರೆವಿನ್ಯೂ ಅಥಾರಿಟೀಸ್ ಅವರು ಆಕ್ಷನ್ ಮಾಡಲಿಕ್ಕೆ ಕೊಡಬೇಕಾಗುತ್ತದೆ. ಇದರಿಂದ ರೆವಿನ್ಯೂ ಅಥಾರಿಟೀಸ್‌ನವರು ಮತ್ತೆ ಆಕ್ಷನ್ ಮಾಡಿ ದುಡ್ಡು ಕಟ್ಟಲಿಕ್ಕೆ ತಡವಾಗುತ್ತದೆ. ಆದ್ದರಿಂದ

೩೦ ದಿವಸಗಳ ಒಳಗಡೆ ಟ್ಯಾಕ್ಸ್ ಕಟ್ಟಿದೇ ಇರತಕ್ಕಂಥವರು ಕಟ್ಟಿದರೆ ಅವರ ವಾಹನವನ್ನು ವಾಪಸ್ಸು ಕೊಡತಕ್ಕದ್ದು. ಇಲ್ಲದಿದ್ದರೆ ವೆಹಿಕಲ್ ಅನ್ನು ಸೀಜ್ ಮಾಡಿ ಆರ್. ಟಿ. ಒ. ದವರೇ ಆಕ್ಷನ್ ಮಾಡಿ ಟ್ಯಾಕ್ಸ್ ಹಣ ತೆಗೆದುಕೊಂಡು ಉಳಿದ ಹಣವನ್ನು ವಾಪಸ್ಸು ಕೊಡುವುದಕ್ಕೆ ಈ ತಿದ್ದುಪಡಿಯನ್ನು ಮಂಡಿಸಲಾಗಿದೆ. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೭ನೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—ಖಂಡ ೨ ಮತ್ತು ೩ ವಿಧೇಯಕದ ಅಂಗವಾಗಿರುತ್ತದೆ.

(ಖಂಡ ೨ ಮತ್ತು ೩ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ ೧ ಇತ್ಯಾದಿ ;

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಪಿ. ಜಿ. ಆರ್. ಸಿಂಧ್ಯ,—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (೨ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ'

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, '' ೧೯೮೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (೨ನೇ ತಿದ್ದುಪಡಿ) ವಿಧೇಯಕ '' ವನ್ನು ಸಭೆಯು ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸದನವು ಸಾಯಂಕಾಲ ೫ ಗಂಟೆ ೬ ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ ೩ನೇ ಸೆಪ್ಟೆಂಬರ್ ೧೯೮೭ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯವಾಯಿತು)